# ಸ್ವಾಮಿ ಸತ್ಪ್ರಕಾಶಾನಂದ (೧೮೮೮-೧೯೭೯)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಭಾಗ ೧ ಅನುವಾದ: **ಕುಮಾರಿ ಪಿ. ಉಷಾ**

ಸ್ವಾಮಿ ಸತ್ಪ್ರಕಾಶಾನಂದರು ರಾಮಕೃಷ್ಣ ಸಂಘದ ಸುವಿಖ್ಯಾತ ವಿದ್ವಾಂಸ ಸಾಧುಗಳು. ೧೮೮೮ನೆ ಇಸವಿಯಲ್ಲಿ ಢಾಕಾದಲ್ಲಿ ಜನಿಸಿದ ಅವರು ೧೯೦೧ ಸ್ವಾಮೀಜಿಯವರು ಢಾಕಾಗೆ ಹೋಗಿದ್ದಾಗ ಸ್ವಾಮೀಜಿಯವರನ್ನು ಮೂರು ಬಾರಿ ದರ್ಶನ ಮಾಡಿದ್ದರು. ಆಗ ಅವರಿಗೆ ಹನ್ನೆರಡು ವಯಸ್ಸು. ನಂತರದ ಕಾಲದಲ್ಲಿ ಅವರಿಂದ ಸ್ವಾಮೀಜಿಯವರ ಸ್ಮೃತಿಗಳನ್ನು ಕೇಳಿ, ಅವರ ಸ್ವರವನ್ನು Vivekananda as We Saw Him DVDಯಲ್ಲಿ ಸೇರಿಸಿದ್ದೇವೆ. ಸ್ವಾಮೀಜಿಯವರ ಆ ಸಮ್ಮೋಹಕ ಚಕ್ಷುಗಳನ್ನು ಮರೆಯುವಂತಿಲ್ಲ, ಎಂದು ಅವರು ಹೇಳುತ್ತಿದ್ದರು. ಸ್ವಾಮೀಜಿಯವರ ದರ್ಶನದಿಂದ ಅವರು ರಾಮಕೃಷ್ಣ ಸಂಘವನ್ನು ಸೇರಲು ಪ್ರೇರಣೆ ಪಡೆದಿದ್ದರು.

೧೯೭೨ರಲ್ಲಿ ನಾನು ಸ್ವಾಮಿ ಸತ್ಪ್ರಕಾಶಾನಂದರ ದರ್ಶನವನ್ನು ಸೇಂಟ್ ಲೂಯಿಸ್‌ನಲ್ಲಿ ಪಡೆದೆ. ನಾನಾಗ ಹಾಲಿವುಡ್ ಆಶ್ರಮದ ಕಾರ್ಯಕರ್ತ. ಸೆಕೆಗಾಲದ ರಜೆಯಲ್ಲಿ ನಾನು ಸೇಂಟ್ ಲೂಯಿಸ್, ಚಿಕಾಗೊ, ಬಾಸ್ಟನ್ ಹಾಗೂ ಥೌಸೆಂಡ್ ಐಲ್ಯಾಂಡ್ ಪಾರ್ಕ್‌ಗೆ ಹೋದೆ. ಮೂರು ನಾಲ್ಕು ದಿನಗಳು ಮಹಾರಾಜರೊಂದಿಗಿದ್ದೆ. ನನಗೊಂದು ದಿನ ಅವರು ಭಾಷಣ ನೀಡಲು ಹೇಳಿದರು, ಹಾಗೂ ಸಂನ್ಯಾಸ ಮಂತ್ರದ ಜೀರ್ಣವಾಗಿದ್ದ ಪುಸ್ತಕವನ್ನು ಹೊಸದಾಗಿ ಬರೆದುಕೊಡಲು ಹೇಳಿದರು. ಅವರು ಠಾಕೂರರ ಒಂಬತ್ತು ಮಂದಿ ಸಂನ್ಯಾಸಿ ಶಿಷ್ಯರನ್ನು ಕಂಡಿದ್ದರು – ವಿವೇಕಾನಂದ, ಬ್ರಹ್ಮಾನಂದ, ಶಿವಾನಂದ, ಪ್ರೇಮಾನಂದ, ಅದ್ಭುತಾನಂದ, ಅಖಂಡಾನಂದ, ಅಭೇದಾನಂದ, ವಿಜ್ಞಾನಾನಂದ ಹಾಗೂ ಸುಬೋಧಾನಂದ. ಸತ್ಪ್ರಕಾಶಾನಂದರು ಇವರೆಲ್ಲರ ಸ್ಮೃತಿಕತೆಯನ್ನು 'Sri Ramakrishna's Life and Teachings' ಪುಸ್ತಕದ ಪರಿಶಿಷ್ಟದಲ್ಲಿ ಬರೆದಿರುವರು.

ಅವರು ೧೯೦೮ ಸರಸ್ವತೀ ಪೂಜೆಯಂದು ಬೇಲೂರು ಮಠದಲ್ಲಿ ಸ್ವಾಮಿ ಬ್ರಹ್ಮಾನಂದ ಹಾಗೂ ಸ್ವಾಮಿ ಪ್ರೇಮಾನಂದರನ್ನು ಪ್ರಥಮ ಬಾರಿ ದರ್ಶಿಸಿದ್ದರು. ಆ ದಿನ ಯಾವ ತಾರೀಖು ಎಂಬುದನ್ನು ತಿಳಿಸಲು ನನಗೆ ಹೇಳಿದರು. ನಾನೆಂದೆ, 'ಮಹಾರಾಜ್, ತಾರೀಖನ್ನು ನಾನು ನಿಮಗೆ ಕಳುಹಿಸಿಕೊಡುತ್ತೇನೆ.' ನಂತರ ನಾನು ಕಲ್ಕತ್ತದ ಅದ್ವೈತ ಆಶ್ರಮದ ಲೈಬ್ರೆರಿಯನ್‌ಗೆ ಗುಪ್ತ ಪ್ರೆಸ್‌ನ ಪಂಚಾಂಗದ ಆಫೀಸಿಗೆ ಹೋಗಿ ಆ ದಿನಾಂಕವನ್ನು ತಿಳಿದುಕೊಳ್ಳಲು ಹೇಳಿದೆ. ಅವರು ಎಂಟಾಣೆ ಕೊಟ್ಟು ಆ ವರ್ಷದ ಪಂಚಾಂಗದಿಂದ ದಿನಾಂಕವನ್ನು ತಿಳಿದು (೬ ಫೆಬ್ರವರಿ, ಗುರುವಾರ) ನನಗೆ ಕಳುಹಿಸಿದರು. ಹಾಲಿವುಡ್‌ನಿಂದ ಈ ದಿನಾಂಕವನ್ನು ಬರೆದು ಅವರಿಗೆ ಕಳುಹಿಸಿದಾಗ ಅವರು ಬಹಳ ಸಂತೋಷಪಟ್ಟರು. ಏಕೆಂದರೆ ಅದೇ ಸಮಯ ಅವರು ತಮ್ಮ ಸ್ಮೃತಿಗಳನ್ನು ಬರೆಯುತ್ತಿದ್ದರು. 'ಸ್ವಾಮಿ ಬ್ರಹ್ಮಾನಂದೇರ್ ಸ್ಮೃತಿಕಥಾ' ಪುಸ್ತಕದಲ್ಲಿನ ಸತ್ಪ್ರಕಾಶಾನಂದರ ಸ್ಮೃತಿಗಳನ್ನು ನಾನು ಇಂಗ್ಲಿಷಿನಿಂದ ಬಂಗಾಳಿಗೆ ಅನುವಾದಿಸಿದ್ದೆ.



ರಾಜಾ ಮಹಾರಾಜರು ಢಾಕಾಗೆ ಹೋಗಿದ್ದ ಸಂಬಂಧವಾಗಿ ಒಂದು ಘಟನೆಯನ್ನು ಅವರು ಸ್ವಾಮಿ ಪವಿತ್ರಾನಂದಜಿಯವರಿಗೆ ೧೭.೦೩.೧೯೬೦ರಂದು ಬರೆದರು: ''ಮಹಾರಾಜರು ತಮ್ಮ ಸಂಗಡಿಗರೊಂದಿಗೆ ೧೯೧೬ರಲ್ಲಿ ಢಾಕಾಗೆ ಹೋಗಿದ್ದಾಗ ಕಾಸೀಮ್ ಪುರದ ಜಮೀನ್ದಾರರ ಮನೆಯಲ್ಲಿ ತಂಗಲು ವ್ಯವಸ್ಥೆಯನ್ನು ಮಾಡಲಾಗಿತ್ತು, ಎಂಬುದು ನಿಮಗೆ ತಿಳಿದ ವಿಷಯವೆ. ಬಾಬುರಾಮ ಮಹಾರಾಜರು ಹಾಗೂ ಮಹಾರಾಜರು ಒಂದೇ ಶಯನಗೃಹವನ್ನು ಉಪಯೋಗಿಸುತ್ತಿದ್ದರು. ಒಂದು ದಿನ ಸಾಯಂಕಾಲದ ಹೊತ್ತಿಗೆ ಉನ್ನತ ಪದವಿಯಲ್ಲಿದ್ದ ಸಜ್ಜನರೊಬ್ಬರು ಮಹಾರಾಜರನ್ನು ಕಾಣಲು ಬಂದರು. ಮಹಾರಾಜರು ಆಗ ಶಯನಗೃಹದಲ್ಲೆ ಇದ್ದರು. ನಾನು ಸಹ ಅಲ್ಲಿಯೆ ಇದ್ದೆ. ಮತ್ತಾರಿದ್ದರೆಂದು ನನಗೆ ನೆನಪಿಲ್ಲ. ಮಾತಿನ ನಡುವೆ ಆ ಸಜ್ಜನರು ಹೇಳಿದರು 'ಸಂಸಾರಿಗಳಾದ ನಮಗೆ ನಾನಾ ತೊಂದರೆಗಳು. ನಾನಾ ಬಗೆಯ ಕಷ್ಟ-ಕಾರ್ಪಣ್ಯಗಳಿಗೆ ಕೊನೆಯಿಲ್ಲ. ನಾವು ಭಗವಂತನೆಡೆಗೆ ಹೇಗೆ ಮುನ್ನಡೆಯಬಲ್ಲೆವು?' ಮಹಾರಾಜರು ದೃಢತೆಯಿಂದ ಉತ್ತರಿಸಿದರು, 'ನೋಡಿ, ಭಗವಂತನನ್ನು ಕರೆದರೆ ಆತನ ಕೃಪೆಯಿಂದ ಪರ್ವತದಂತಹ ದುರಿತಗಳು ಬೂದಿ

ಯಂತೆ ಚದುರಿಹೋಗುತ್ತವೆ.' – 'ಪರ್ವತದಂತಹ ದುರಿತಗಳು ಬೂದಿಯಂತೆ ಚದುರಿಹೋಗುತ್ತವೆ' – ಎಂಬ ಮಾತುಗಳನ್ನು ರಾಜಾ ಮಹಾರಾಜರು ಒತ್ತಿ ಹೇಳಿದರು.''

ಸತ್ಪ್ರಕಾಶಾನಂದರು ತಮ್ಮ ತಂದೆ-ತಾಯಿಯರ ಏಕಮಾತ್ರ ಪುತ್ರ. ತಂದೆ ಅಲ್ಪ ವಯಸ್ಸಿನಲ್ಲೆ ತೀರಿಕೊಂಡರು. ತಮ್ಮ ವೃದ್ಧ ತಾಯಿಯ ಜವಾಬ್ದಾರಿ ಮಹಾರಾಜರ ಮೇಲಿತ್ತು. ವಿದ್ಯಾರ್ಥಿ ದೆಸೆಯಿಂದಲೇ ಮಠ-ಮಿಷನ್ನಿನ ಸಂಪರ್ಕದಲ್ಲಿದ್ದ ಅವರು ಢಾಕಾ ಮಠ ಪ್ರಾರಂಭವಾದಾಗಿನಿಂದಲೇ ಅಲ್ಲಿ ಸೇವೆ ಸಲ್ಲಿಸುತ್ತಿದ್ದರು. ಬೇರೆ ಬೇರೆ ಸಮಯದಲ್ಲಿ ಅವರು ತಮ್ಮ ಹಿಂದಿನ ನೆನಪುಗಳನ್ನು ಉತ್ಸಾಹಭರಿತರಾಗಿ ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು:

೧೯೦೮ರ ಜನವರಿ ತಿಂಗಳ ಕೊನೆಯಲ್ಲಿ ನಾನು ನನ್ನ ಸ್ನೇಹಿತನೊಂದಿಗೆ ಢಾಕಾದಿಂದ ಕಲ್ಕತ್ತಕ್ಕೆ ಹೋದೆ. ನಾನಾಗ ಢಾಕಾ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ಮೊದಲ ವರ್ಷದ ವಿದ್ಯಾರ್ಥಿ. ತೀರ್ಥಯಾತ್ರೆಯ ಸಲುವಾಗಿ ೧೦ ದಿನಗಳ ಕನ್ಸೆಷನ್ ಟಿಕೇಟು ಸಿಕ್ಕಿತು. ಬಹುಶಃ ಅಂದು ಸೋಮವಾರ, ೩ನೆ ಫೆಬ್ರವರಿ ಸೂರ್ಯಗ್ರಹಣ. ಗಂಗಾಸ್ನಾನ ಮಾಡುವ ಪುಣ್ಯ ದಿನ. ನಾನೂ ಗಂಗಾಸ್ನಾನ ಮಾಡಿದೆ.

ಚಿಕ್ಕ ವಯಸ್ಸಿನಿಂದಲೆ ರಾಮಕೃಷ್ಣ ಮಠ-ಮಿಷನ್ನಿನೊಂದಿಗೆ ನಿಕಟ ಸಂಪರ್ಕವಿದ್ದುದರಿಂದ ಕಲ್ಕತ್ತದ ಸುತ್ತಮುತ್ತ ಸಂಪರ್ಕಿಸಬಹುದಾದವರ ಹಾಗೂ ಸ್ಥಳಗಳ ಹೆಸರುಗಳನ್ನು ತಿಳಿದಿದ್ದೆ. ೧೯೦೧ನೆ ಇಸವಿ ಮಾರ್ಚ್ ತಿಂಗಳಿನಲ್ಲಿ ಸ್ವಾಮಿ ವಿವೇಕಾನಂದರ ದರ್ಶನವನ್ನು ಮೂರು ಬಾರಿ ಪಡೆದುದು ನನ್ನ ಮಹಾ ಸೌಭಾಗ್ಯವೇ ಸರಿ. ೧೯೦೫ರ ಶರತ್ಕಾಲದಿಂದ ನಾನು ಢಾಕಾದ ರಾಮಕೃಷ್ಣ ಎಸೋಸಿಯೇಷನ್‌ನಲ್ಲಿ ನಿರ್ದಿಷ್ಟ ಕೆಲಸವನ್ನು ಮಾಡುತ್ತಿದ್ದೆ. ಶನಿವಾರ ಸಾಯಂಕಾಲ ನಡೆಯುತ್ತಿದ್ದ ನಮ್ಮ ಸಾಪ್ತಾಹಿಕ ಅಧಿವೇಶನದಲ್ಲಿ 'ಶ್ರೀರಾಮಕೃಷ್ಣ ಕಥಾಮೃತ' ('ವಚನವೇದ'ದ ಬಂಗಾಳಿ ಮೂಲ ಗ್ರಂಥ) ವನ್ನು ಓದುತ್ತಿದ್ದೆ. ಬಳಿಕ ಭಜನೆಗಳನ್ನು ಹಾಡುತ್ತಿದ್ದೆವು.

ಕಲ್ಕತ್ತ ತಲುಪಿದಾಗ ಸ್ವಾಭಾವಿಕವಾಗಿಯೇ ಹತ್ತಿರದಲ್ಲಿದ್ದ 'ಕಥಾಮೃತ'ದ ಕರ್ತೃಗಳನ್ನು ಭೇಟಿಮಾಡುವ ಆಸೆ ಜಾಗೃತವಾಯಿತು. ನನಗೆ ನೆನಪಿರುವಂತೆ ಫೆಬ್ರವರಿ ಒಂದನೆ ತಾರೀಖು ಅವರ ತಂದೆಯ ಕಡೆಯ ನಿವಾಸವಾದ ಗುರುಪ್ರಸಾದ ಚೌಧುರಿ ಲೇನ್‌ಗೆ ಹೋದೆ. ಮನೆಯೊಳಗೆ ಹೋಗಿ ಶ್ರೀ-'ಮ' ಅವರ ಬಗ್ಗೆ ವಿಚಾರಿಸಿದಾಗ ಅವರು ಮೂರನೆ ಅಂತಸ್ತಿನಲ್ಲಿರುವುದಾಗಿ ತಿಳಿದು ಬಂತು.

ಅಲ್ಲಿಗೆ ಹೋದಾಗ ಮಾಸ್ಟರ್ ಮಹಾಶಯರು ಕೆಲವು ಮಂದಿ ಭಕ್ತರೊಡನೆ ವರಾಂಡದಲ್ಲಿ ಕುಳಿತಿದ್ದುದು ಕಂಡುಬಂತು. ಪಕ್ಕದಲ್ಲೇ ದೇವರ ಮನೆ. ಅನಿರೀಕ್ಷಿತವಾಗಿಯೇ ನನ್ನ ಆಪ್ತಗೆಳೆಯನೊಬ್ಬ ಆ ಭಕ್ತರ ಜತೆಯಲ್ಲಿ 'ಕಥಾಮೃತ'ವನ್ನು ಓದುತ್ತಿರುವುದನ್ನು, ಮಾಸ್ಟರ್ ಮಹಾಶಯರು ಸಂಪೂರ್ಣ ಏಕಾಗ್ರತೆಯಿಂದ ಅದನ್ನು ಆಲಿಸುತ್ತಿರುವುದನ್ನು ಕಂಡೆ. 'ಏನಾಶ್ಚರ್ಯ! ಇವರೇ 'ಕಥಾಮೃತ'ದ ಕರ್ತೃಗಳಾಗಿದ್ದು ವಿದ್ಯಾರ್ಥಿಯಂತೆ ಅದನ್ನು ಕೇಳಿಸಿಕೊಳ್ಳುತ್ತಿರುವರಲ್ಲ' ಎಂದು ವಿಸ್ಮಯಗೊಂಡೆ.

ಅಲ್ಲಿ ಸಾಗರ ಬಾಬುರವರನ್ನು ಕಂಡು ತುಂಬ ಖುಷಿಯಾಯಿತು. ಅವರು ವೈದ್ಯಕೀಯವನ್ನೋದಲು ಢಾಕಾದಿಂದ ಕಲ್ಕತ್ತಕ್ಕೆ ಬಂದಿದ್ದರು. 'ಕಥಾಮೃತ'ದ-ಪಠನದ ಬಳಿಕ ಅದರ ಬಗ್ಗೆ ಸಂಕ್ಷಿಪ್ತ ಚರ್ಚೆ ನಡೆಯಿತು. ಬಳಿಕ ಸಾಗರ ಬಾಬುವಿನ ಹೊರತು ಮಿಕ್ಕವರೆಲ್ಲ ಹೊರಟು ಹೋದರು. ಸಾಗರಬಾಬು ನನ್ನನ್ನು ಮಾಸ್ಟರ್ ಮಹಾಶಯರಿಗೆ ಪರಿಚಯಿಸುತ್ತ, ನಾನು ಢಾಕಾದ ರಾಮಕೃಷ್ಣ ಎಸೋಸಿಯೇಷನ್‌ನೊಂದಿಗೆ ನಿಕಟ ಸಂಪರ್ಕ ಹೊಂದಿರುವೆನೆಂದು ಹೇಳಿದರು.

ಸಾಗರ ಬಾಬು ವಿದಾಯ ಹೇಳಿದ ಬಳಿಕ ಮಾಸ್ಟರ್ ಮಹಾಶಯರು ಮಾತು ಮುಂದುವರಿಸುತ್ತ ಢಾಕಾ ರಾಮಕೃಷ್ಣ ಎಸೋಸಿಯೇಷನ್ ಬಗ್ಗೆ ವಿಚಾರಿಸಿದರು. ದೇವರ ಮನೆಯಿಂದ ಒಂದು ಲೋಟದಲ್ಲಿ ಪ್ರಸಾದದ ಜಲವನ್ನೂ ಒಂದು ತಟ್ಟೆಯಲ್ಲಿ 'ಸಂದೇಶ' (ಸಿಹಿತಿಂಡಿ) ಪ್ರಸಾದವನ್ನೂ ಕೊಟ್ಟರು. ಅವರು ಹೇಳಿದಂತೆ ನಾನು ಅವುಗಳನ್ನು ಹೊರಗಡೆ ಛಾವಣಿಯಲ್ಲಿ ತಿಂದು ಮಾಸ್ಟರ್ ಮಹಾಶಯರ ಬಳಿ ಹಿಂದಿರುಗಿದೆ. ಅವರು ನನ್ನನ್ನು 'ಲೋಟ-ತಟ್ಟೆಯನ್ನು ಎಲ್ಲಿರಿಸಿದೆ?' ಎಂದಾಗ ನಾನು 'ಅವುಗಳನ್ನು ಛಾವಣಿಯಲ್ಲಿಟ್ಟಿದ್ದೇನೆ' ಎಂದೆ. ಅವರೆಂದರು 'ಇಲ್ಲ, ಇದು ಸರಿಯಿಲ್ಲ. ನೀನು ಅವುಗಳನ್ನು ತೊಳೆದಿಡು.' ನಾನು ಅವುಗಳನ್ನು ಕೆಳಗಿನ ಅಂತಸ್ತಿನಲ್ಲಿದ್ದ ನಲ್ಲಿಯಲ್ಲಿ ತೊಳೆದು ತಂದೆ. ಚೆನ್ನಾಗಿ ಒರೆಸಿ ಅವುಗಳ ನಿರ್ದಿಷ್ಟ ಸ್ಥಳದಲ್ಲಿ ಅವುಗಳನ್ನಿಡಲು ಹೇಳಿದರು. ಬಳಿಕ 'ಠಾಕೂರರು ಎಲ್ಲ ವಸ್ತುಗಳನ್ನೂ ಠಾಕುಠೀಕಾಗಿ ಇರಿಸುತ್ತಿದ್ದರು; ಸ್ವಚ್ಛತೆಗೆ ಬಹಳ ಪ್ರಾಮುಖ್ಯತೆ ನೀಡುತ್ತಿದ್ದರು. ರಾತ್ರಿಯ ಅಂಧಕಾರದಲ್ಲೂ ಕಷ್ಟವಿಲ್ಲದೆ ಕೈಗೆ ಸಿಗುವಂತೆ ನಿರ್ದಿಷ್ಟ ಸ್ಥಳಗಳಲ್ಲಿ ವಸ್ತುಗಳನ್ನಿಡಬೇಕೆಂದು ಅವರು ಉಪದೇಶಿಸುತ್ತಿದ್ದರು' ಎಂದರು.

ಮಾಸ್ಟರ್ ಮಹಾಶಯರು ನನ್ನ ಬಗ್ಗೆ ಹಾಗೂ ಢಾಕಾದ ನಮ್ಮ ಕಾರ್ಯಗಳ ಬಗ್ಗೆ ಪುನಃ ಪ್ರಶ್ನಿಸಿದರು. ನಾನೆಂದೆ, ''ಢಾಕಾದ ಉಪನಗರದಲ್ಲೂ ನಾವೊಂದು ಆಶ್ರಮವನ್ನು ಪ್ರತಿಷ್ಠಾಪಿಸಲು ಪ್ರಯತ್ನಿಸಿದ್ದೇವೆ. ಶ್ರೀಮಂತ ಕುಟುಂಬದ ಹುಡುಗಿಯನ್ನು ವಿವಾಹವಾದ ನನ್ನ ಸ್ನೇಹಿತರಾದ ಸಾಗರ ಬಾಬು ಆಶ್ರಮಕ್ಕೆ ಕೆಲವು ಎಕರೆ ಜಮೀನನ್ನು ದಾನ ಮಾಡಿದ್ದಾರೆ. ಅಲ್ಲಿ ನಾವೊಂದು ಕುಟೀರವನ್ನು ಕಟ್ಟಿ ಆಶ್ರಮವನ್ನು ಪ್ರಾರಂಭಿಸಿದ್ದು ನಮ್ಮೊಡನೆ ಕೆಲಸ ಮಾಡುವ ಯುವ ಸಹಕರ್ಮಚಾರಿಯೊಬ್ಬನು ಅಲ್ಲಿ ವಾಸಿಸುತ್ತಿದ್ದಾನೆ. ಅವನು ಸಂನ್ಯಾಸಿಯಾಗಬೇಕೆಂದಿದ್ದಾನೆ.''

ಮಾತು ಮುಂದುವರಿಸುತ್ತ ನಾನು ಮಾಸ್ಟರ್ ಮಹಾಶಯರಿಗೆ ಹೇಳಿದೆ. ''ಠಾಕೂರರ ಸರ್ವಧರ್ಮ ಸಮನ್ವಯದ ಆದರ್ಶದಂತೆ ಅಲ್ಲಿ ವಿಭಿನ್ನ ಧರ್ಮಗಳ ದೇವಸ್ಥಾನಗಳನ್ನು ಪ್ರತಿಷ್ಠಾಪಿಸುತ್ತೇವೆ.'' ಬಹಳ ಹುಮ್ಮಸ್ಸಿನಿಂದ ಹೇಳುತ್ತ ಹೋದೆ, ''ಅಲ್ಲಿ

ಹಿಂದೂ ದೇವಸ್ಥಾನ, ಮುಸಲ್ಮಾನರ ಮಸೀದಿ, ಕ್ರೈಸ್ತರ ಇಗರ್ಜಿ ಹಾಗೂ ಬೌದ್ಧ ದೇವಾಲಯಗಳು ಇದ್ದು ಭವಿಷ್ಯದಲ್ಲಿ ಇತರ ಧರ್ಮಗಳ ದೇವಸ್ಥಾನಗಳನ್ನೂ ನಿರ್ಮಿಸುವೆವು. ಪ್ರತಿಯೊಂದು ದೇವಮಂದಿರದೆದುರು ಯೋಗ್ಯ ನಿದರ್ಶನಗಳೂ ಇರುವುವು. ಆಶ್ರಮದ ಪ್ರವೇಶದ್ವಾರದಲ್ಲಿ ದೊಡ್ಡದಾದ 'The Temple of Harmony of Religions' (ಸರ್ವಧರ್ಮ ಸಮನ್ವಯ ಮಂದಿರ) ಎಂಬ ಸೈನ್ ಬೋರ್ಡ್ ಕೂಡ ಇರುವುದು.'' ಈ ನನ್ನ ಉತ್ಸಾಹಪೂರಿತ ಮಾತುಗಳನ್ನು ಮಾಸ್ಟರ್ ಮಹಾಶಯರು ಶಾಂತಚಿತ್ತರಾಗಿ ಆಲಿಸಿದರು.

ನಾನು ಮಾತು ನಿಲ್ಲಿಸಿದಾಗ ಅವರೆಂದರು, ''ಹಾಗಾದರೆ ನೀವು ಬಯಸುವುದು ಸೈನ್ ಬೋರ್ಡ್ ಹಾಗೂ ವಿಜ್ಞಾಪನೆ, ಎನ್ನು! ನಿಮ್ಮದೇ ಜಾಹೀರಾತು – ಇದು ಠಾಕೂರರ ಭಾವವಲ್ಲ. ಜನಕಲ್ಯಾಣದ ಕಾರ್ಯಗಳನ್ನು ಮಾಡುವ ಮುನ್ನ (ಬೆರಳಿನಿಂದ ತಮ್ಮ ಹೃದಯವನ್ನು ಸ್ಪರ್ಶಿಸಿ) ಈ ಹೃದಯದೊಳಗೆ ಸ್ವಲ್ಪವೇನನ್ನಾದರೂ ಸಂಚಯ ಮಾಡುವುದು ಆವಶ್ಯಕ. ಮೊದಲು ನೀವೆಲ್ಲ ಭಗವದ್ಭಕ್ತಿಯನ್ನು ಪಡೆಯಿರಿ. ಅದರ ಹೊರತು ಏನನ್ನೂ ಮಾಡಲು ಸಾಧ್ಯವಿಲ್ಲ. ನೀವು ಬರಿಯ ನಿಮ್ಮ ಶಕ್ತಿಯನ್ನು ನಷ್ಟ ಮಾಡಿಕೊಳ್ಳುತ್ತಿರುವಿರಿ, ಅಷ್ಟೆ. ನಿರ್ಜನ ಪ್ರದೇಶದಲ್ಲಿ ಗೋಪ್ಯವಾಗಿ ಭಗವಂತನಲ್ಲಿ ಪ್ರಾರ್ಥಿಸಬೇಕೆಂದು ಠಾಕೂರರು ಪದೇ ಪದೇ ಹೇಳುತ್ತಿದ್ದರು.''

'ನಿರ್ಜನ ಪ್ರದೇಶದಲ್ಲಿ–ಗೋಪ್ಯವಾಗಿ' ಎಂಬ ಎರಡು ಪದಗಳನ್ನು ಮಾಸ್ಟರ್ ಮಹಾಶಯರು ಪುನರಾವರ್ತಿಸಿದರು. ಇದೇ ಅರ್ಥದ ಬೈಬಲ್‌ನ ಉಪದೇಶವನ್ನು ಉಲ್ಲೇಖಿಸಿದರು: ''ನೀನು ಪ್ರಾರ್ಥಿಸುವಾಗ ಕೋಣೆಯೊಳಗೆ ಹೋಗಿ ಕದ್ದು ಮುಚ್ಚಿ ಗೋಪ್ಯವಾಗಿ ಸ್ವರ್ಗದಲ್ಲಿರುವ ನಿನ್ನ ತಂದೆಯನ್ನು ಪ್ರಾರ್ಥಿಸು. ಭಗವಂತನು ನಿನ್ನ ಗೋಪ್ಯ ಪ್ರಾರ್ಥನೆಗೆ ಪ್ರಕಾಶವಾಗಿ ಪುರಸ್ಕರಿಸುವನು''(ಮ್ಯಾಥ್ಯೂ ೬.೬). ನಾನು ಸುಮ್ಮನಿದ್ದೆ; ಏನನ್ನೂ ಹೇಳದಾದೆ.

ನಂತರ ಮಾಸ್ಟರ್ ಮಹಾಶಯರು ನನಗೆಂದರು, ''ನೀನು ಮೊದಲ ಸಲ ಕಲ್ಕತ್ತಕ್ಕೆ ಬಂದಿರುವೆ. ಶ್ರೀಮಾತೆ, ಮಹಾರಾಜ್ (ಬ್ರಹ್ಮಾನಂದಜಿ) ಹಾಗೂ ಬಾಬುರಾಮ ಮಹಾರಾಜರ ದರ್ಶನ ಹಾಗೂ ಬೇಲೂರು ಮಠ ಮತ್ತು ದಕ್ಷಿಣೇಶ್ವರ ದರ್ಶನವನ್ನು ಅವಶ್ಯವಾಗಿ ಮಾಡು.'' ಈ ಯೋಜನೆಯನ್ನು ನಾನು ಮೊದಲೇ ಮಾಡಿಕೊಂಡಿದ್ದೆ.

ಮಾಸ್ಟರ್ ಮಹಾಶಯರ ನಿರ್ದೇಶನದಂತೆ ೧೯೦೮ರಲ್ಲಿ ನಾನು ಶ್ರೀಮಾತೆಯವರ ದರ್ಶನವನ್ನು ಮಾಡಿದೆ. ಅವರು ತಮ್ಮ ತಲೆಯನ್ನು ಸೀರೆಯ ಸೆರಗಿನಿಂದ ಮುಚ್ಚಿಕೊಂಡಿದ್ದರು. ನಾನು ಬರಿಯ ಪಾದಸ್ಪರ್ಶವನ್ನು ಮಾಡಿ ಪ್ರಣಾಮ ಸಲ್ಲಿಸಿದೆ.

೧೯೧೬ನೆಯ ಇಸವಿಯ ಸೆಕೆಗಾಲದಲ್ಲಿ ನಾನು ಬೇಲೂರು ಮಠಕ್ಕೆ ಹೋಗಿ ಅಲ್ಲಿ ಕೆಲವು ದಿನ ತಂಗಿದ್ದೆ. ರಾಜಾ ಮಹಾರಾಜರು ಅನೇಕ ವೇಳೆ ಬಲರಾಮ ಬಸುರವರ ಮನೆಯಲ್ಲಿ ಇರುತ್ತಿದ್ದರು. ನಡುನಡುವೆ ನಾನು ಅಲ್ಲಿಗೆ ಹೋಗಿ ಅವರನ್ನು ದರ್ಶಿಸುತ್ತಿದ್ದೆ. ನಂತರ ಅವರು ಮಠಕ್ಕೆ ಬಂದಾಗ ಒಂದು ದಿನ ದೀಕ್ಷೆಯ ವಿಷಯ ಪ್ರಸ್ತಾಪಿಸಿದೆ. ಅವರು ನನಗೆ ಕೆಲವು ಪ್ರಾರಂಭಿಕ ಉಪದೇಶಗಳನ್ನು ನೀಡಿ, ದೀಕ್ಷೆಯನ್ನು ನಂತರ ಪಡೆಯಬಹುದೆಂದು ಹೇಳಿದರು. ಒಂದು ದಿನ ಅವರೆಂದರು, ''ಸಾಧ್ಯವಾದಷ್ಟು ದಿನ ಇಲ್ಲಿಗೆ ಬಾ. ಇದರಿಂದ ನಿನಗೆ ಯಾವುದೇ ರೀತಿಯ ಕೆಡುಕಾಗುವುದಿಲ್ಲ.''

ಅವರು ನನಗೆ ಪ್ರಾಥಮಿಕ ಸಲಹೆಗಳನ್ನು ನೀಡಿದಾಗ ನಾನು ಸಂನ್ಯಾಸಿಯಾಗುವ ಇಚ್ಛೆಯನ್ನು ಪ್ರಕಟಿಸಿದೆ. ನನ್ನ ಮನೆಯ ಪರಿಸ್ಥಿತಿಯನ್ನು ತಿಳಿದ ಮಹಾರಾಜರು, ''ಈಗ ನಿನ್ನ ತಾಯಿಯ ಸೇವೆಯನ್ನು ಮಾಡುವುದೇ ನಿನ್ನ ಕರ್ತವ್ಯ. ಸತ್ಯವಚನ ಹಾಗೂ ಬ್ರಹ್ಮಚರ್ಯವನ್ನು ಪಾಲಿಸು.''

೧೯೧೬ರ ಗ್ರೀಷ್ಮದಲ್ಲಿ ವಿನೋದ ಎಂಬ ಒಬ್ಬ ಯುವಕ ಬೇಲೂರು ಮಠಕ್ಕೆ ಬಂದಿದ್ದ. ಅವನಿಗೆ ಬಾಬುರಾಮ ಮಹಾರಾಜರೆಂದರೆ ಬಹಳ ಪ್ರೀತಿ. ಅವನು ಅವರ ಜೊತೆಯಲ್ಲಿ ಓಡಾಡುತ್ತಿದ್ದ. ಇದನ್ನು ಮಹಾರಾಜರು ಲಕ್ಷಿಸಿದರು. ಒಮ್ಮೆ ಮಹಾರಾಜರಿಗೆ ಪ್ರಣಾಮ ಮಾಡಲು ಬಂದಾಗ, ''ನನ್ನ ರಜೆ ಮುಗಿಯುತ್ತ ಬಂತು. ನಾನು ಮನೆಗೆ ಹೋಗಬೇಕು''ಎಂದ. ''ನೀನು ಬಾಬುರಾಮ ಮಹಾರಾಜರಿಗೆ ಪ್ರಣಾಮ ಮಾಡಿದೆಯೇನು?'' ''ಇಲ್ಲ. ಈಗ ಹೋಗುವೆ.'' ''ನೋಡು, ಬಾಬುರಾಮ ಮಹಾರಾಜರಿಗೆ ಪ್ರಣಾಮ ಮಾಡುವಾಗ ಒಂದು ಮಂತ್ರವನ್ನು ಹೇಳಬೇಕು. ಆ ಪ್ರಣಾಮ ಮಂತ್ರ ನಿನಗೆ ತಿಳಿದಿದೆಯೆ?'' ''ಇಲ್ಲ, ಅದು ನನಗೆ ಗೊತ್ತಿಲ್ಲ.'' ''ನೀನು ಈ ಮಂತ್ರವನ್ನು ಕಲಿ – ಸ್ವಗೃಹಕ್ಕೆ ತೆರಳಲು ಮನಸಿಲ್ಲ ನನಗೆ; ನಿಮ್ಮ ಚರಣತಲದಲ್ಲಿ ಅನವರತ ಇರುವಾಸೆ ಎನಗೆ.''

ಸ್ವಲ್ಪವೇ ಹೊತ್ತಿನಲ್ಲಿ ಬಾಬುರಾಮ ಮಹಾರಾಜರು ವರಾಂಡದ ಟೀ-ಟೇಬಲ್‌ನ ಸಮೀಪದಲ್ಲಿದ್ದ ಬೆಂಚಿನ ಮೇಲೆ ಕುಳಿತರು. ವಿನೋದ ಬಾಬುರಾಮ ಮಹಾರಾಜರಿಗೆ ಪ್ರಣಾಮ ಮಾಡಲೆಂದು ಅವರಲ್ಲಿಗೆ ಹೋದನು. ಮಹಾರಾಜ್ ನನಗೆಂದರು, ''ಅವನೇನು ಮಾಡುತ್ತಾನೆಂದು ನೀನು ಹೋಗಿ ನೋಡು.'' ನಾನು ಅಲ್ಲಿಗೆ ಹೋದಾಗ ವಿನೋದನು ಬಾಬುರಾಮ ಮಹಾರಾಜರಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತ ಏನನ್ನೋ ಗೊಣಗುಟ್ಟುತ್ತಿರುವುದನ್ನು ಕಂಡೆ. ಬಾಬುರಾಮ ಮಹಾರಾಜರು ಅವನಿಗೆ ಹೇಳಿದರು.''ಅದೇನು ಹೇಳಬೇಕೆಂದಿರುವೆಯೋ ಹೇಳಪ್ಪ.'' ಅವನಿಂದ ಏನೂ ಹೇಳಲಾಗಲಿಲ್ಲ. ನಾನು ನಕ್ಕುಬಿಟ್ಟೆ. ನನ್ನನ್ನು ನೋಡಿ ಬಾಬುರಾಮ ಮಹಾರಾಜರು ಹೇಳಿದರು, ''ಅವನೇನು ಹೇಳುತ್ತಿರುವನೆಂದು ನಿನಗೆ ಗೊತ್ತೆ?'' ನಾನು, ''ಹ್ಞಂ, ಗೊತ್ತು. ಮಹಾರಾಜರು ಅವನಿಗೊಂದು ಪ್ರಣಾಮ ಮಂತ್ರವನ್ನು ಕಲಿಸಿದ್ದಾರೆ,'' ಎನ್ನುತ್ತ ಆ ಪ್ರಣಾಮ ಮಂತ್ರವನ್ನು ಹೇಳಿದೆ. ಬಾಬುರಾಮ ಮಹಾರಾಜರು ಹೊಟ್ಟೆ ಹುಣ್ಣಾಗುವಂತೆ ನಗುತ್ತ, ''ಈ ರೀತಿ ಮೋಜು ಮಾಡುವುದೆಂದರೆ ಮಹಾರಾಜರಿಗೆ ಬಲು ಇಷ್ಟ' ಎಂದರು.

*(ಮುಂದಿನ ಸಂಚಿಕೆಗೆ)*